**MVC-529/2024** **ಪಿ.ಡಬ್ಲ್ಯೂ-2 (ಡಾ.ಸುನೀಲ್ ಕುಮಾರ್)**

ದಿನಾಂಕಃ 21**.03.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ. ಬಿ.ಎಂ.ಎಂ. ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಡಿ.ಜಿ.ಎನ್. ವಕೀಲರಿಂದಃ**

ಗಾಯಾಳು ನೇರವಾಗಿ ನಮ್ಮ ಆಸ್ಪತ್ರೆಗೆ ಬಂದಿದ್ದರೋ ಅಥವಾ ಬೇರೆ ಕಡೆ ಪ್ರಥಮ ಚಿಕಿತ್ಸೆ ಪಡೆದುಕೊಂಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಚಿಕಿತ್ಸೆ ನೀಡಿದಾಗ ಗಾಯಾಳು ಪ್ರಥಮ ಚಿಕಿತ್ಸೆ ಪಡೆದುಕೊಂಡಿದ್ದ ಬಗ್ಗೆ ಚಿಹ್ನೆಗಳು ಕಂಡು ಬಂದ ಬಗ್ಗೆ ನೆನಪಿಲ್ಲ. ಗಾಯಾಳು ಆಸ್ಪತ್ರೆಗೆ ಬಂದಾಗ ಮೊದಲು ಕೇಸ್ ಶೀಟನ್ನು ತಯಾರು ಮಾಡುತ್ತೇವೆ. ಕೇಸ್ ಶೀಟ ನಲ್ಲಿ ಗಾಯಾಳುವಿಗೆ ಗಾಯಗಳು ಹೇಗೆ ಉಂಟಾದವು ಮತ್ತು ಎಲ್ಲಿ ಉಂಟಾದವು ಎಂದು ನಮೂದು ಮಾಡುತ್ತೇವೆ. ಕೇಸ್ ಶೀಟಿನಲ್ಲಿ ಆ ರೀತಿ ಅಪಘಾತದ ಹಿನ್ನೆಲೆಯನ್ನು ನಮೂದು ಮಾಡಿಲ್ಲ. ನಾನು ದಿನಾಂಕ 19.01.2024 ರಂದು ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ. ಗಾಯಾಳು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ನಂತರ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಲಭ್ಯವಿರುವ ಓ.ಪಿ.ಡಿ. ಸ್ಲಿಪ್ ಆಧರಿಸಿ ಗಾಯಾಳು ಹೊರರೋಗಿಯಾಗಿ ಚಿಕಿತ್ಸೆ

ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತೇನೆ. ಆ ರೀತಿ ಓ.ಪಿ.ಡಿ. ಸ್ಲಿಪ್ಗಳು ಕೇಸ್ ಶೀಟಿನಲ್ಲಿ ಲಭ್ಯವಿಲ್ಲ. ನಾನು ಗಾಯಾಳುವಿಗೆ ಅಂಗನ್ಯೂನ್ಯತೆಯನ್ನು 2018 ರ ಕೇಂದ್ರ ಸರ್ಕಾರದ ಸುತ್ತೋಲೆ ಆಧರಿಸಿ ಹೇಳಿರುತ್ತೇನೆ. 2018 ರ ಸುತ್ತೋಲೆಯ ಪ್ರಕಾರ ಅಂಗನ್ಯೂನ್ಯತೆಯನ್ನು ನಿರ್ಧಸಿರುವ ಪೂರ್ವದಲ್ಲಿ ಒಂದು ನಮೂನೆಯಲ್ಲಿ ಪೂರ್ಣ ವಿವರವನ್ನು ನಮೂದಿಸಬೇಕು ಎಂದರೆ ಸರಿ . ಆ ರೀತಿ ಗಾಯಾಳುವಿಗೆ ಸಂಬಂಧಿಸಿದ ಚಾರ್ಟನ್ನು ತಯಾರಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ನಾನು 2018 ರ ಸುತ್ತೋಲೆಯನ್ನು ಆಧರಿಸಿ ಅಂಗನ್ಯೂನ್ಯತೆಯನ್ನು ಹೇಳಿರುವುದಿಲ್ಲ. ಗಾಯಳುವಿಗೆ ಸಹಾಯವಾಗಲಿ ಎಂದು ಹೆಚ್ಚಿನ ಅಂಗನ್ಯೂನ್ಯತೆಯನ್ನು ಹೇಳಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**